ಯನ್ನು ಬಿಟ್ಟು ಹೋಗಿಬಿಡುತ್ತಾರೆ. ಅಂದರೆ ಇವರುಗಳು ಕೆಲಸ ಮಾಡುವುದು ಕೇವಲ ೨–೩ ತಾಸು ಗಳು ಮಾತ್ರ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಈ ನೌಕರರು ದಾಂಡೇಲಿಯಿಂದ ಹೊರಟು ಜೊಯಿಡಾಗಿ ಸರಿಯಾಗಿ ಹತ್ತೂವರೆ ಗಂಟೆಗೆ ಬರುವಂತೆ ಮತ್ತು ಇಲ್ಲಿಂದ ಸರಿಯಾಗಿ ಐದೂವರೆ ಗಂಟೆಗೆ ಹೊರಡುವಂತಹ ಒಂದು ಜವಾಬ್ದಾರಿಯನ್ನು ತಾವು ಹೊತ್ತುಕೊಳ್ಳುತ್ತೀರಾ ?

ಶ್ರೀ ಜೆ. ಎಚ್. ಅಶ್ವತ್ಥರೆಡ್ಡಿ.—ಈಗ ಈ ನೌಕರರು ದಾಂಡೇಲಿಯನ್ನು ಬೆಳಿಗ್ಗೆ ೯ ಗಂಟೆಗೆ ಬಿಟ್ಟು ಹತ್ತೂವರೆ ಗಂಟೆಗೆಲ್ಲಾ ಜೋಯಿಡಾಗೆ ಬರುತ್ತಿದ್ದಾರೆ. ಅನಂತರ ಐದೂವರೆ ಗಂಟೆಯಾದ ಮೇಲೆ ಕಛೇರಿಯನ್ನು ಬಿಟ್ಟು ಬಸ್‌ನಲ್ಲಿ ದಾಂಡೇಲಿಗೆ ಹೋಗುತ್ತಿದ್ದಾರೆ. ಇವರುಗಳು ತಮ್ಮ ವಾಸಸ್ಥಳವನ್ನು ಜೋಯಿಡಾಗೆ ಸ್ಥಳಾಂತರ ಮಾಡಿದ ಮೇಲೆ ಈ ರೀತಿ ತೊಂದರೆಯಾಗುವುದಿಲ್ಲ. ಈಗಲೂ ಇವರುಗಳು ಕಛೇರಿಗೆ ಸಮಯಕ್ಕೆ ಸರಿಯಾಗಿ ಬರುತ್ತಿರುವುದರಿಂದ ಕಛೇರಿಯು ಕೆಲಸ ಕಾರ್ಯಗಳಿಗೆ ಯಾವ ತೊಂದರೆಯೂ ಆಗುತ್ತಿಲ್ಲ.

ಶ್ರೀ ಡಿ. ವಿ. ವೈಗಾಂಕರ್.—ಈ ಕಛೇರಿ ಕಟ್ಟಡಗಳನ್ನು ಕಟ್ಟಲು ೪೮ ಲಕ್ಷ ರೂಪಾಯಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಠೇವಣಿಯನ್ನಿಡಲಾಗಿದೆ ಎಂದು ಹೇಳಿದ್ದೀರಿ. ಈ ಹಣದಲ್ಲಿ ಇನ್ನುಳಿದ ೫ ಕಛೇರಿಗಳಿಗೆ ಸಂಬಂಧಪಟ್ಟ ಕಟ್ಟಡಗಳ ಕೆಲಸ ಒಳಗೊಂಡಿದೆಯೇ ?

ಶ್ರೀ ಜೆ. ಎಚ್. ಅಶ್ವತ್ಥರೆಡ್ಡಿ.—ಹೌದು, ಒಳಗೊಂಡಿದೆ.

ಶ್ರೀ ವಿ. ಎಂ. ಫಾಡಿ.—ತಾವು ೪೮ ಲಕ್ಷ ರೂ.ಗಳನ್ನು ಈ ಠೇವಣಿ ಇಟ್ಟಿದ್ದರೂ ಸಹ ಈ ಕೆಲಸ ಏತಕ್ಕೆ ಆಗಿಲ್ಲ ?

ಶ್ರೀ ಜೆ. ಎಚ್. ಅಶ್ವತ್ಥರೆಡ್ಡಿ.—ಕೆಲಸ ನಡೆದಿದೆ. ಇನ್ನೂ ಪೂರ್ತಿಯಾಗಿಲ್ಲ. ಇದರ ಜೊತೆಗೆ ನೌಕರರಿಗೆ ವಾಸದ ಮನೆಗಳನ್ನು ಕಟ್ಟಿಸಿಕೊಡುವ ಸಲುವಾಗಿ ೭೫ ಲಕ್ಷ ರೂಪಾಯಿಗಳ ಅಂದಾಜನ್ನು ತಯಾರಿಸುತ್ತಿದ್ದೇವೆ.

ಶ್ರೀ ಡಿ.ವಿ. ವೈಗಾಂಕರ್. —ಯಾವ ಒಂದು ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸ ಮುಗಿಯುತ್ತ ದೆಂಬುದನ್ನು ತಾವು ತಿಳಿಸುತ್ತೀರಾ ?

ಶ್ರೀ ಜೆ. ಎಚ್. ಅಶ್ವತ್ಥರೆಡ್ಡಿ.—ನಾವು ಹಣವನ್ನು ಈಗಾಗಲೇ ಕೊಟ್ಟಿದ್ದೇವೆ. ೧೯೮೨–೮೩ರಲ್ಲಿ ಈ ಕೆಲಸವನ್ನು ಮುಗಿಸುವುದಾಗಿ ಲೋಕೋಪಯೋಗಿ ಇಲಾಖೆಯವರು ಹೇಳಿದ್ದಾರೆ. ಈ ಕೆಲಸ ಜಾಗ್ರತೆಯಾಗಬೇಕೆಂದು ನಾವು ಅವರಿಗೆ ಮಾಹಿತಿ ಮನವಿ ಮಾಡಿಕೊಳ್ಳುತ್ತೇವೆ.

ಶ್ರೀ ಡಿ. ವಿ. ವೈಗಾಂಕರ್.—ಕೆ.ಪಿ.ಸಿ. ಅವರು ಹಣ ಠೇವಣಿ ಮಾಡಿದ ಕೂಡಲೇ ಅದರ ಜವಾಬ್ದಾರಿ ಮುಗಿಯಲಿಲ್ಲ. ಲೋಕೋಪಯೋಗಿ ಇಲಾಖೆಯವರಿಗೆ ಜಾಗ್ರತೆ ಮುಗಿಸಬೇಕೆಂದು ಹೇಳಬೇಕು ಮತ್ತು ಇದರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಎಸ್. ಅಶ್ವತ್ಥರೆಡ್ಡಿ.—ಈ ವಿಷಯದಲ್ಲಿ ನಾನು ೧೯೮೧ರ ಆಗಸ್ಟ್ ತಿಂಗಳಲ್ಲಿ ಒಂದು ಮೀಟಿಂಗ್ ಸಹ ಕರೆದಿದ್ದೆ. ಆ ಮೀಟಿಂಗ್‌ನಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಈ ಕೆಲಸವನ್ನು ಜಾಗ್ರತೆ ಮುಗಿಸಬೇಕೆಂದು ಹೇಳಲಾಗಿತ್ತು. ಒಟ್ಟಿನಲ್ಲಿ ಈ ಕೆಲಸ ೧೯೮೨–೮೩ರಲ್ಲಿ ಪೂರ್ಣ ವಾಗುತ್ತದೆಂಬ ಭರವಸೆಯನ್ನು ಕೊಡುತ್ತೇನೆ.

Gajanur lift Irrigation Scheme in Shimoga

826 SRI SHEERNILY CHANDRASEKHAR (Hosanagar).—Will the Minister of State for Major and Medium Irrigation be pleased to state —

(a) whether the Government is aware that the concerned authorities are thinking of erecting Lift Irrigation pumps near Sakre Byle instead of Mandli as construed under Gajanur Lift Irrigation in Shimoga (Taluk);

(b) whether the Government is aware that if the pump is installed in Mandli area of Shimoga taluk larger extent of Agricultural land will be irrigated and more number of people will be benefitted;

(c) whether the Government is aware that there is a great demand to install the pump at Mandli;

(d) if so, when the Government is considering the request and when it is giving administrative sanction as far Gajanur lift Irrigation is concerned to install pump at Mandli in Shimoga taluk?

SRI B. B. CHIMMANAKATTI (Minister of State for Major and Medium Irrigation).—

(a) Yes. Instead of lifting the water from the Tunga river near Mandli, it is proposed to Lift water from Tunga anicut near Gajanur (Sakrebylu) and take a lift canal therefrom. This lift canal will cover the area near Mandali also. The scheme is called Tunga Lift Irrigation Scheme at Gajanur.

(b) The extent of area benefitted and the number of people benefitted depend on the quantity of water going to be lifted and height to which to be lifted and not on the location of the lift.

(c) Yes.

(d) Tunga Lift Irrigation Scheme near Gajanur (Sakrebylu) is under investigation. After technical and economic feasibility is established and project cleared by Government of India and depending on the fuuds available for major irrigation, Tunga lift irrigation project will be taken up for execution.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ ನನ್ನ ಮೂಲ ಪ್ರಶ್ನೆ ಏನೆಂದರೆ ಗಾಜನೂರು ಬಳಿ ಸಕ್ಕರೆ ಬಯಲು ಬಳಿ ಏತ ನೀರಾವರಿ ಪಂಪನ್ನು ಅಳವಡಿಸುವುದರ ಬದಲು ಮಂಡಲಿಯಲ್ಲಿ ಅಳವಡಿಸಿದರೆ ಅಲ್ಲಿನ ಜನರಿಗೆ ಹೆಚ್ಚು ಅನುಕೂಲವಾಗುವುದಲ್ಲದೆ ಹೆಚ್ಚು ಭೂಮಿಯೂ ಕೂಡ ನೀರಾವರಿಯಾಗುವುದಕ್ಕೆ ಅವಕಾಶವಾಗುತ್ತದೆ. ಈ ಬಗ್ಗೆ ನಿಮ್ಮ ಇಲಾಖೆಯವರು ಅಜಮಾಯಿಷಿ ಮಾಡಿ ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆಯೇ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅವರು ಅಜಾಮಾಯಿಷಿಯೇ, ನೀವು ಏನು ಪ್ರಶ್ನೆ ಕೇಳಿದ್ದೀರಿ ಅದಕ್ಕೆ ಸರಿಯಾದ ಉತ್ತರವನ್ನು ಒದಗಿಸಿದ್ದಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾನು ಈ ಪ್ರಾಂತ್ಯದಿಂದ ಸದಸ್ಯನಾಗಿ ಬಂದು ೧೧ ವರ್ಷವಾಗಿದೆ. ನನಗೆ ಆ ಪ್ರಾಂತದಲ್ಲಿ ಹೆಚ್ಚಿನ ಅನುಭವ ಇರುವುದರಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ತಾವು ಮಂಡಲಿಯಲ್ಲಿ ಪಂಪನ್ನು ಅಳವಡಿಸುವುದಾದರೆ ಆ ಜಾಗದಲ್ಲಿರುವ ಜನಕ್ಕೆ ಜಾಸ್ತಿ ಉಪಯೋಗವಾಗುತ್ತದೆ ಅಲ್ಲದೆ ಹೆಚ್ಚುವರಿ ಭೂಮಿಯೂ ಸಿಗುತ್ತದೆ. ಈ ಕೆಲಸವನ್ನು ಸರಿಯಾಗಿ ಕಂಪ್ಲೀಟ್ ಮಾಡದೇ, ಸರಿಯಾಗಿ ಎಕ್ಸಾಮಿನ್ ಮಾಡದೆ, ಈ ರೀತಿ ಉತ್ತರ ಕೊಡುವುದು ಸರಿಯೇ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ —ಮಾನ್ಯ ಸದಸ್ಯರು ನಾನು ಆ ಕ್ಷೇತ್ರದಿಂದ ಬಂದು ೧೧ ವರ್ಷ ವಾಯಿತು, ಹಾಗೆ, ಹೀಗೆ ಕೇಳುವುದರ ಬದಲು ನೇರವಾದ ಪ್ರಶ್ನೆ ಹಾಕಿದರೆ ನೇರವಾದ ಉತ್ತರ ಕೊಡ ಬಹುದು.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಸಕ್ಕರೆ ಬಯಲು ಬಳಿ ಪಂಪನ್ನು ಅಳವಡಿಸುವುದರ ಬದಲಾಗಿ ಮಂಡಲಿಯಲ್ಲಿ ಪಂಪನ್ನು ಅಳವಡಿಸಿದರೆ ಅಲ್ಲಿ ಕಾಗುವಳಿಗೆ ಹೆಚ್ಚು ಭೂಮಿಯೂ ಸಿಗುತ್ತದೆ ಮತ್ತು ಜಾಸ್ತಿ ಜನರಿಗೂ ಉಪಕಾರವಾಗುತ್ತದೆ. ಇದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಸದಸ್ಯರು ಮಂಡಲಿಯಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಂ ತೆಗೆದುಕೊಂಡರೆ ಜಾಸ್ತಿ ಜನಕ್ಕೆ ಅನುಕೂಲವಾಗುತ್ತದೆ, ಹಾಗೆ ಮಾಡುತ್ತೀರಾ ಎಂದು ಕೇಳಿದ್ದಾರೆ, ಮಂಡಲಿಯಲ್ಲಿ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಕೃಷ್ಣಾ ಟ್ರಿಬ್ಯೂನಲ್ಸ್ ಪ್ರಕಾರ ಅಲೋಕೇಷನ್ ಮಾಡಬೇಕಾಗಿದೆ. ಅದನ್ನು ಇನ್‌ವೆಸ್ಟಿಗೇಷನ್ ಮಾಡಿ ಅಲ್ಲಿ ಈ ಒಂದು ಪ್ರಾಜೆಕ್ಟ್ ಕೆಲಸ ತೆಗೆದು ಕೊಳ್ಳಬೇಕೆಂದು ಇದ್ದೇವೆ. ಅದರಲ್ಲಿ ಮೊದಲನೇ ಮಾಸ್ಟರ್ ಪ್ಲಾನ್ ಪ್ರಕಾರ ಎರಡನೇ ಹಂತದಲ್ಲಿ ಅಲೋಕೇಷನ್ ಆಗಿದೆ ಅದರಲ್ಲಿ ೭೩೪ ಟಿಎಂಸಿ ವಾಟರ್ ಸಿಗುವ ಸಾಧ್ಯತೆ ಇದೆ. ಹಾಗೆಯೇ ಎರಡನೇ ಮಾಸ್ಟರ್ ಪ್ಲಾನ್‌ನಲ್ಲಿ ೧೦೫೮ ಟಿ.ಎಂ.ಸಿ. ವಾಟರ್ ಸಿಗುವ ಸಾಧ್ಯತೆ ಇದೆ. ಅದನ್ನೂ ಸಹ ಎರಡನೇ ಹಂತದಲ್ಲಿ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು ಕಳೆದ ವರ್ಷದ ಆಯವ್ಯಯದ ಪಟ್ಟಿಯಲ್ಲಿ ಈ ಒಂದು ಸ್ಕೀಂ ಅನ್ನು ತೆಗೆದುಕೊಳ್ಳಬೇಕೆಂದು ಸೇರಿಸಿದ್ದೀರಲ್ಲಾ, ಆ ಬಗ್ಗೆ ಯಾವುದನ್ನೂ ತಾವು ಪರಿಶೀಲಿಸದೇ ಸೇರಿಸಿದ್ದಿರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅದು ಒಂದು ಪ್ರಪೋಸಲ್ ಅಷ್ಟೆ. ಮೊದಲು ಆ ಸ್ಕೀಂ ಅನ್ನು ಸಿದ್ಧ ಮಾಡಿಸಿದೆವು, ಆದರೆ ಅದು ಕಾರ್ಯಗತವಾಗಬೇಕಾದರೆ ನಮಗೆ ಸೆಂಟ್ರಲ್ ಕ್ಲಿಯರೆನ್ಸ್ ಸಿಗ ಬೇಕಾಗುತ್ತದೆ. ಅದು ಸಿಗದೆ ನಾವು ತೆಗೆದುಕೊಳ್ಳುವ ಹಾಗೆ ಇಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು ಕಳೆದ ಬಡ್ಜೆಟ್‌ನಲ್ಲಿ ಈ ಒಂದು ಸ್ಕೀಂಅನ್ನು ಸೇರಿಸಿದ್ದೀರಿ. ಹೀಗಿದ್ದರೂ ಕೂಡ ಇನ್ನೂ ಅದನ್ನು ಅಜಮಾಯಿಸಿ ಮಾಡಬೇಕು, ಕೃಷ್ಣಾ ವಾಟರ್‌ದ್ದು ಅಲೋಕೇಷನ್ ಬರಬೇಕು ಎಂದರೆ ಇದು ಸರಿಯಾದ ಉತ್ತರವೇ ? ಈ ವರ್ಷವಾದರೂ ಅದಕ್ಕೆ ಅಡ್ಮಿನಿ ಸ್ಟ್ರೇಷನ್ ಸ್ಯಾಂಕ್ಷನ್ ಕೊಡುತ್ತಾರೋ ಇಲ್ಲವೋ ಹೇಳಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನಾವು ಬಡ್ಜೆಟ್‌ನಲ್ಲಿ ಇನ್‌ಕ್ಲೂಡ್ ಮಾಡಿದ ಮಾತ್ರಕ್ಕೆ ಅಷ್ಟು ಬೇಗ ಕೆಲಸ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದಕ್ಕೆ ಸೆಂಟ್ರಲ್ ಕ್ಲಿಯರೆನ್ಸ್ ಬೇಕಾಗುತ್ತದೆ. ಅದು ದೊರೆತ ಮೇಲೆ ಆ ಯೋಜನೆಯ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ನನ್ನ ಪ್ರಶ್ನೆ ಇಷ್ಟೆ ಸಕ್ಕರೆ ಬಯಲು ಪ್ರದೇಶದಲ್ಲಿ ಏತ ನೀರಾವರಿ ಯೋಜನೆ ಮಾಡಬೇಕು ಎಂದು ಮಾಡಿದ್ದೀರಲ್ಲಾ, ಅಲ್ಲಿರುವುದೆಲ್ಲಾ ಅರಣ್ಯ ಜಮೀನುಗಳು, ಅಲ್ಲಿ ನೀರಾವರಿಯಾಗುತ್ತದೆ. ಈ ಮಂಡಲಿಯಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಂ ತೆಗೆದು ಕೊಂಡರೆ ಇಲ್ಲಿ ಅದಕ್ಕಿಂತಲೂ ಹೆಚ್ಚು ಭೂಮಿ ನೀರಾವರಿಯಾಗುತ್ತದೆ. ಅಲ್ಲದೇ ಇಲ್ಲಿರತಕ್ಕಂಥಾ ಭೂಮಿ ಈಗ ಹಾಲಿ ಸಾಗುವಳಿಯಾಗಿರತಕ್ಕಂಥಾದ್ದು ಮತ್ತು ರೆವಿನ್ಯೂ ಜಮೀನುಗಳಾಗಿವೆ. ಆದುದರಿಂದ ಅದಕ್ಕಿಂತಲೂ ಹೆಚ್ಚು ಅನುಕೂಲ ಈ ಮಂಡಲಿ ಪ್ರದೇಶದಲ್ಲಿರುವವರಿಗೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಎರಡೂ ಕಡೆಯಲ್ಲೂ ಈ ಏತ ನೀರಾವರಿ ಯೋಜನೆಯನ್ನು ತರುತ್ತೀರಾ ಸ್ವಾಮಿ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮೊದಲು ಮಂಡಲಿಯಲ್ಲಿ ಲಿಫ್ಟ್ ಇರಿಗೇಷನ್ ಮಾಡಬೇಕು ಎಂದು ಯೋಜನೆ ಮಾಡಿ ಒಂದು ಪ್ರಪೋಸಲ್ ತಯಾರು ಮಾಡಿದೆವು. ಆದಾನಮೇಲೆ ಇನ್ನೂ ಒಳ್ಳೆಯ ರೀತಿ ಯಲ್ಲಿ ಹೆಚ್ಚು ಪ್ರದೇಶವನ್ನು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿ ಮತ್ತೆ ೩ ಲಿಫ್ಟ್ ಇರಿಗೇಷನ್ ಸ್ಕೀಂಗೆ ಪ್ರಪೋಸಲ್ ಹಾಕಿದೆವು. ನಂತರ ಮತ್ತೊಂದು ಯೋಜನೆಗೂ ಸಹ ಪ್ರಪೋಸಲ್ ಅನ್ನು ಸಿದ್ಧ ಪಡಿಸಿದೆವು. ಈ ಪ್ರಕಾರ ಅಪ್ಪರ್ ತುಂಗಾದಲ್ಲಿ ಫ್ಲೋ ಇರಿಗೇಷನ್ ಸ್ಕೀಂ ತೆಗೆದುಕೊಂಡರೆ ಅದರಲ್ಲಿ ೨ ಲಕ್ಷ ೩೪ ಸಾವಿರ ಎಕರೆ ನೀರಾವರಿ ಪ್ರದೇಶವಾಗುತ್ತದೆ. ಈ ಸ್ಕೀಂ ಏನಾದರೂ ಸ್ಯಾಂಕ್ಷನ್ ಆದರೆ ಮಂಡಲಿ ಪ್ರದೇಶದಲ್ಲಿರತಕ್ಕಂಥಾ ಜನರಿಗೂ ಸಹ ಲಾಭವಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ಯಾಂಕ್ಷನ್ ಆದರೆ ಎಂದು ಹೇಳಿದರಲ್ಲಾ ಯಾವಾಗ ಸ್ಯಾಂಕ್ಷನ್ ಆಗುತ್ತದೆ ಎಂದು ಹೇಳುತ್ತೀರಾ ? ಕಳೆದ ಆಯ್ಯವ್ಯಯ ಪಟ್ಟಿಯಲ್ಲಿ ಇದಕ್ಕಾಗಿ ೧ ಕೋಟಿ ೫೦ ಲಕ್ಷ ರೂಪಾಯಿ ಸೇರಿಸಿದ್ದೀರಿ. ಈ ಬಿಸಿಲು ಕಾದುರೆ ಹಾಗೆ ನಾನು ಇದನ್ನು ನೋಡಿಬಿಟ್ಟು ಆ ಜನಕ್ಕೆಲ್ಲಾ ನಿಮಗೆ ಸಿಕ್ಕುತ್ತದೆ ನಿಮಗೆಲ್ಲಾ ಅನುಕೂಲವಾಗುತ್ತದೆ ಎಂದು ಹೇಳಿಕೊಂಡು ಬರುತ್ತಾ ಇದ್ದೇನೆ. ಆದುದರಿಂದ ತಾವು ಇದಕ್ಕೆ ತಾಂತ್ರಿಕ ಪರ್ಮಿಷನ್ ಅನ್ನು ಯಾವಾಗ ಕೊಡುತ್ತೀರಾ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ —ಈ ಒಂದು ನೀರಾವರಿ ವಿಷಯ ಇದೆ ಇದು ಕೃಷ್ಣಾ ಟ್ರಿಬ್ಯೂನಲ್ ಮುಂದೆ ಇರುವುದರಿಂದ ಅವರು ಈ ಬಗ್ಗೆ ಅಲೋಕೇಷನ್ ಮಾಡಬೇಕು. ಇದಕ್ಕೆ ಆಲ್ಟರ್‌ನೇಟೀವ್ ಆಗಿ ನಾವು ಈ ಒಂದು ಲಿಫ್ಟ್ ಇರಿಗೇಷನ್, ಫ್ಲೋ ಇರಿಗೇಷನ್ ಸ್ಕೀಂ ಒಂದನ್ನು ಸೇರಿಸಿದ್ದೇವೆ. ಇದು ಮೊದಲಿನ ಒಂದು ಸ್ಕೀಂಗೆ ಇನ್‌ಕ್ಲೂಡ್ ಆಗಿರಲಿಲ್ಲಾ. ನಾವು ಈ ಬಗ್ಗೆ ಎರಡು ಮಾಸ್ಟರ್ ಪ್ಲಾನ್ ಮಾಡಿದ್ದೇವೆ. ಮೊದಲನೇ ಮಾಸ್ಟರ್ ಪ್ಲಾನ್‌ನಲ್ಲಿ ೭೫೦ ಟಿ.ಎಂ.ಸಿ. ವಾಟರ್ ಸಿಗುವ ಸಾಧ್ಯತೆ ಇದೆ, ಎರಡನೇ ಮಾಸ್ಟರ್ ಪ್ಲಾನ್‌ನಲ್ಲಿ ೧೦೫೦ ಟಿ.ಸಿ.ಎಂ. ವಾಟರ್ ಸಿಗುವ ಸಾಧ್ಯತೆ ಇದೆ. ಈ ಯೋಜನೆಯಲ್ಲಿ ಸೇರಿದರೆ ಮುಂದೆ ಅನುಕೂಲವಾಗಬಹುದು ಎನ್ನುವ ದೃಷ್ಟಿಯಿಂದ ಸೇರಿಸಿದ್ದೇವೆ ವಿನಾ ಮತ್ತೇನೂ ಅಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈಗ ಈ ಒಂದು ಯೋಜನೆಯನ್ನು ಬಡ್ಜೆಟ್ಟಿನಲ್ಲಿ ಸೇರಿಸಿದ್ದೀರಲ್ಲಾ ಇದು ಪರಿಶೀಲನೆಯಲ್ಲಿ ಇದೆಯೇ, ಇಲ್ಲವೇ, ಹೇಳಿ. ಇದೇನೂ ಹುಡುಗಾಟಿಕೆ ಕೆಲಸವಲ್ಲ ಆಯವ್ಯಯದಲ್ಲಿ ಸುಮ್ಮ ಸುಮ್ಮನೇ ಸೇರಿಸುವುದಕ್ಕಾಗುವುದಿಲ್ಲ. ಇದನ್ನು ಮಂಜೂರು ಮಾಡದೇ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೊಡದೆ? ಸುಮ್ಮ ಸುಮ್ಮನೆ ಏತಕ್ಕೆ ಸೇರಿಸಿದಿರಿ ?

ಅಧ್ಯಕ್ಷರು.—ಮೊದಲೇ ನೀವು ಇದನ್ನು ಆಯವ್ಯಯದಲ್ಲಿ ಸೇರಿಸಬಾರದಾಗಿತ್ತು ಎನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನನ್ನ ಮೂಲಭೂತ ಪ್ರಶ್ನೆ ಇದಕ್ಕೆ ತಾವು ಅಡ್ಮಿನಿಸ್ಟ್ರೇಷನ್ ಸ್ಯಾಂಕ್ಷನ್ ಕೊಡದೇ ಹೋದಮೇಲೆ ಏತಕ್ಕೆ ಇದನ್ನು ಮೊದಲೇ ಆಯವ್ಯಯದಲ್ಲಿ ಸೇರಿಸ ಬೇಕಾಗಿತ್ತು ಎಂದು ಕೇಳುತ್ತೇನೆ. ಅಲ್ಲದೆ ಈ ಬಗ್ಗೆ ಕೇಂದ್ರದಿಂದ ಪರವಾನಗಿ ತೆಗೆದುಕೊಳ್ಳದೇ ಇದನ್ನು ಹಾಗೇನೇ ಸೇರಿಸುವುದಕ್ಕೆ ಸಾಧ್ಯವೇ? ಕೇಂದ್ರದಿಂದ ಅನುಮತಿ ತೆಗೆದುಕೊಳ್ಳದೇ, ಎಲ್ಲಾ ಶಾಸಕರನ್ನೂ ಕರೆಸಿ ಇದರ ಬಗ್ಗೆ ಅಧ್ಯಯನ ಮಾಡದೇ ಆಯವ್ಯಯದಲ್ಲಿ ಹಾಗೆಯೇ ಸೇರಿಸುವುದಕ್ಕೆ ಸಾಧ್ಯವೇ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮೊದಲು ನಾವು ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್ ಮಾಡಿ ಕೆಲವು ಸಂದರ್ಭದಲ್ಲಿ ಅಂಥಾದ್ದನ್ನು ಇನ್‌ಕ್ಲೂಡ್ ಮಾಡಿಬಿಡುತ್ತೇವೆ. ಆದರೆ ಅದನ್ನು ಕಾರ್ಯಗತ ಮಾಡುವ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಅನುಮತಿ ಮತ್ತು ಅಡ್ಮಿನಿಸ್ಟ್ರೇಟೀವ್ ಸಾಂಕ್ಷನ್ ಪಡೆದುಕೊಳ್ಳ ಬೇಕಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಹಾಗಾದರೆ ಈ ಯೋಜನೆಗೆ ಎಷ್ಟು ದಿವಸದಲ್ಲಿ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೊಡುತ್ತೀರಾ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಅದನ್ನು ಪರಿಶೀಲಿಸಿ ಆದಷ್ಟು ಬೇಗನೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಬರುವ ಹಾಗೆ ಪ್ರಯತ್ನ ಮಾಡುತ್ತೇವೆ.

Installation of Generator in Spun Silk Mills

877 D. T. RAMU (Channapatna).—Will the Minister for Law and Parliamentary Affairs and Veterinary and Animal Husbandry be pleased to state.—

(a) whether it was a fact that generator sets were purchased by the Spun Silk Mills about two years back;

(b) if so, its price;

(c) whether it has been installed ;

(d) if not, the reasons therefor ?

SRI Y. RAMAKRISHNA.—(Minister for Law and Parliamentary Affairs and Veterinary and Animal Husbandry).—

(a) Yes.

(b) Its price is Rs. 7,68,500.

(c) No.

(d) Due to technical reasons there is dely in its installation.

ಶ್ರೀ ಡಿ. ಟಿ. ರಾಮು.—ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ಅದರ ಬೆಲೆ ೭,೬೮೫೦೦ ರೂಪಾಯಿ ಅಂತ ಹೇಳಿದ್ದೀರಿ. ಇದನ್ನು ಸ್ಥಾಪನೆ ಮಾಡಲಿಕ್ಕೆ ಏತಕ್ಕೆ ಇಷ್ಟು ತಡವಾಯಿತು ಎಂದು ಹೇಳಿದ್ದಕ್ಕೆ ತಾಂತ್ರಿಕ ಕಾರಣಗಳಿಂದಾಗಿ ಸ್ಥಾಪಿಸಲು ವಿಳಂಬವಾಗಿದೆ ಅಂತ ಹೇಳಿದ್ದೀರಿ. ಸ್ವಾಮಿ, ೩ ವರ್ಷಗಳಿಂದಲೂ ಕೂಡ ತಾಂತ್ರಿಕ ಕಾರಣಗಳಿಂದ ತಡವಾಯಿತೇ ಅನ್ನುವುದನ್ನು ಡೀಟೇಲ್ ಆಗಿ ಹೇಳುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ಮೊದಲು ನಾವು ೬ ಜನರೇಟರ್ ಬೇಕು ಎಂದು ಟೆಂಡರ್ ಕರೆದಾಗ ಯಾವ ಕಂಪನಿಯವರು ಮೊದಲು ಸಪ್ಲೈ ಮಾಡುತ್ತಿದ್ದರು ಅವರೇನೇ. ನಾವು ಸಪ್ಲೈ ಮಾಡುತ್ತೇವೆಂದು ೩ ೧೧,೩೬೦ ರೂಪಾಯಿಗೆ ಟೆಂಡರ್ ಕೊಟ್ಟರು ಒಬ್ಬರೇ ಒಬ್ಬರಿಂದ ಈ ರೀತಿ ಟೆಂಡರ್ ಬಂದಿದ್ದರಿಂದ ಅದನ್ನು ಕ್ಯಾನ್ಸಲ್ ಮಾಡಿ ಮತ್ತೊಮ್ಮೆ ಬೇರೆ ಟೆಂಡರ್ ಕರೆದೆವು, ಈಗ ಸರ್ಕಾರೀ ಕಾರ್ಖಾನೆಯವರೇ ಅಂದರೆ ಎನ್.ಜಿ.ಇ.ಎಫ್.ನವರು ತಗೆದುಕೊಂಡು ಅದನ್ನು ಇನ್‌ಸ್ಟಾಲ್ ಮಾಡುತ್ತಿದ್ದಾರೆ, ಈಗ ಇನ್‌ಸ್ಟಲೇಷನ್ ಕೆಲಸ ತುರುವಾಗಿದೆ. ಸಿವಿಲ್ ವರ್ಕ್ಸ್ ಕೆಲಸ ಮುಗಿದಿದೆ. ಮುಂದಿನ ತಿಂಗಳು ಬಹುಶಃ ಆಗಸ್ಟ್‌ನಲ್ಲಿ ಜನರೇಟರ್ ಕೆಲಸ ಪೂರ್ಣ ಗೊಳ್ಳುತ್ತದೆ.

ಶ್ರೀ ಡಿ. ಟಿ. ರಾಮು.—ಸ್ವಾಮಿ, ಇದನ್ನು ಕಂಪನಿಯವರಿಂದ ಕೊಂಡುಕೊಳ್ಳುವಾಗ ಒಂದು ಗ್ಯಾರಂಟಿ ಕಾರ್ಡ್‌ಕೊಡುತ್ತಾರೆ. ಆದೇನಾದರೂ ಒಂದು ವರ್ಷದಲ್ಲಿ ಕೆಟ್ಟರೆ ಅವರೇ ಬಂದು ಅದನ್ನು ಸರಿ ಮಾಡುತ್ತಾರೆ. ಈಗಾಗಲೇ ಕೊಂಡು ೩ ವರ್ಷವಾಗಿದೆ, ಆದುದರಿಂದ ಆ ಗ್ಯಾರಂಟಿ ಕಾರ್ಡ್‌ನ ಹಣೇಬರಹ ಏನಾಗಿದೆ ಸ್ವಾಮಿ ? ಇದೇ ಹಣವನ್ನು ತಾವು ಬ್ಯಾಂಕ್‌ನಲ್ಲಿ ಇಟ್ಟಿದ್ದರೆ ಸುಮಾರು ೮೦ ಸಾವಿರ ರೂಪಾಯಿ ಬಡ್ಡಿ ಬರುತ್ತಿತ್ತು. ನಿಮ್ಮ ಕೊಂಡುಕೊಳ್ಳುವ ಒಟ್ಟು ಮೊಬಲಗಿಗೆ ಸುಮಾರು ಒಂದು ವರ್ಷಕ್ಕೆ ೨೬ ಲಕ್ಷ ರೂಪಾಯಿಗಳವರೆಗೆ ಬಡ್ಡಿ ಬರುತ್ತಿತ್ತು. ಹೀಗಿರುವುದರಿಂದ ಇದರ ಬಗ್ಗೆ ಇಷ್ಟು ಉದಾಸೀನ ಏತಕ್ಕೆ ಮಾಡಿದಿರಿ ಸ್ವಾಮಿ ?

ಶ್ರೀ ವೈ ರಾಮಕೃಷ್ಣ.—ಈಗ ನಾವು ಆರು ಜನರೇಟರಗಳನ್ನು ಕೊಂಡುಕೊಂಡಿದ್ದೇವೆ. ಇಲ್ಲದೇ ಹೋಗಿದ್ದರೆ ಅವುಗಳ ಬೆಲೆ ದ್ವಿಗುಣವಾಗುತ್ತಿತ್ತು. ಅದಕ್ಕೋಸ್ಕರ ಏನೂ ಭಯವಿಲ್ಲ ವಿರಡನೆಯದು. ತಾಂತ್ರಿಕ ಕಾರಣ ಎಂದರೆ, ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟ್‌ನವರು ಹೊಸ ವಿಲ್ಲನ್ನು ಸ್ಥಾಪನೆ ಮಾಡುವವರಿದ್ದಾರೆ. ಅವರು ಯಾವ ಸ್ಥಳದಲ್ಲಿ ಜನರೇಟರನ್ನು ಇಡಬೇಕು ಎನ್ನುವುದನ್ನು ತಿಳಿಸಬೇಕು. ಇನ್ನು ನೀವು ಗ್ಯಾರಂಟಿಯ ಬಗ್ಗೆ ಹೇಳಿದ್ದೀರಿ, ಗ್ಯಾರಂಟಿ ಕೊಡುವುದು ಜನರೇಟರನ್ನು ಇನ್‌ಸ್ಟಾಲ್ ಮಾಡಿದನಂತರವೇ ಹೊರತು ಕೊಂಡ ತಕ್ಷಣವಲ್ಲ.

ಶ್ರೀ ಡಿ. ಟಿ. ರಾಮು.—ನಾನು ಕಾರ್ಖಾನೆಯ ಆಡಳಿತ ಮಂಡಳಿಯ ಬಗ್ಗೆ ಹಾಕಿರತಕ್ಕ ಎಲ್ಲಾ ಪ್ರಶ್ನೆಗಳನ್ನು ನೋಡಿದಾಗ ಅಲ್ಲಿ ಏನೋ ಒಂದು ದೋಷ ಕಾಣುತ್ತದೆ. ಅಲ್ಲಿ ಲೂಸ್ ಆಗಿರುವ ಬೋಲ್ಟ್‌ನ್ನು ಬಿಗಿ ಮಾಡುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಲೂಸ್ ಆಗದಿದ್ದರೆ ಟೈಟ್ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

Payment of Compensation to Ex-tenants in Coondapur Taluk, D.K.

962. SRI KAPU SANJEEVA SHETTY (Coondapur)—Will the Minister for Revenue be pleased to state :—

(a) the total amount of compensation paid to ex-land lords since the constitution of land tribunal in Coondapur Taluk, Dakshina Kannada District ; the number of beneficiaries ;

(b) the number of landlords who are yet to be paid compensation amount ; the total compensation amount to be paid ;

(c) whether it has come to the notice of Govenment that thousands of landlords who have lost their lands and are experiencing hardship for the last 5-6 years without getting compensation amount ;

(d) if so, measures proposed to be taken by the Government for immediate payment of compensation amount ?

SRI MALLIKARJUNA M. KHARGE (Minister for Revenue)—

(a) 1. Rs. 26,59,271-85

2. 1.148.

(b) 1. 19.998.

2. Rs. 1.77,89,791-00.

(c) No such specific instance has come to the notice in this district.

(d) Necessary measures are being taken to fix the amount of compensation and for its payment.

ಶ್ರೀ ಕಾಪು ಸಂಜೀವ ಶೆಟ್ಟಿ.—ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಸುಮಾರು ೨೧ ಸಾವಿರ ಭೂ ಮಾಲಿಕರು ತಮ್ಮ ಭೂಮಿಯನ್ನು ಕಳೆದುಕೊಂಡಿದ್ದು ಅದರಲ್ಲಿ ಸುಮಾರು ೧೧೪೮ ಭೂ ಮಾಲಿಕರಿಗೆ ಮಾತ್ರ ಪರಿಹಾರ ಧನವನ್ನು ಕೊಡಲಾಗಿದೆಯೆಂದು ತಾವು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ, ಕಳೆದ ೮ ವರ್ಷಗಳಿಂದ ಈ ಭೂ ಮಾಲೀಕರು ತಮ್ಮ ಭೂಮಿಯನ್ನು ಕಳೆದುಕೊಂಡು, ಪರಿಹಾರವನ್ನು ಪಡೆಯದೆ ತೊಂದರೆಗೀದಾಗ್ದಿರೆ. ಮಾನ್ಯ ಮಂತ್ರಿಗಳು ಉಳಿದ ಭೂ ಮಾಲೀಕರಿಗೆ ಯಾವರೀತಿಯಲ್ಲಿ ಪರಿಹಾರ ಧನವನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಕೇವಲ ಕುಂದಾಪುರ ತಾಲ್ಲೂಕಿಗೆ ಸಂಬಂಧಪಟ್ಟ ಪ್ರಶ್ನೆ, ದಕ್ಷಿಣ ಕನ್ನಡ ಜಿಲ್ಲೆಗೆ ಅಲ್ಲ. ಯಾರು ಕಾನೂನು ಪ್ರಕಾರ ಪರಿಹಾರವನ್ನು ಪಡೆಯಲಿಕ್ಕೆ ಅರ್ಹರಿದ್ದಾರೋ ಅವರೆಲ್ಲರಿಗೂ ಪರಿಹಾರವನ್ನು ಕೊಡುತ್ತೇವೆ. ಈಗ ನಾವು ಯಾರು ಯಾರು ಅರ್ಹರಿದ್ದಾರೆಂದು ಹೇಳಿ ತೀರ್ಮಾನ ತೆಗೆದುಕೊಂಡಿದ್ದೇವೆ. ಅವರಲ್ಲಿ ಕೆಲವರಿಗೆ ಬಾಂಡ್ಸ್ ಕೊಡಬೇಕಾಗಿದೆ. ರಿಸರ್ವ್ ಬ್ಯಾಂಕ್‌ನಿಂದ ಈ ಬಾಂಡುಗಳು ಕ್ಲಿಯರ್ ಆಗಿ ಬಂದು ರೆಡಿಯಾಗಿದೆ. ಸ್ವಲ್ಪ ದಿವಸದಲ್ಲಿಯೇ ಭೂಮಾಲೀಕರಿಗೆ ಬಾಂಡುಗಳನ್ನು ಕೊಡುತ್ತೇವೆ. ಮತ್ತೆ ನವಂಗೆ ಹಣದ ಕೊರತೆಯೇನೂ ಇಲ್ಲ. ಈಗಾಗಲೇ ನಿಮ್ಮ ತಾಲ್ಲೂಕಿನಲ್ಲಿ ೧,೭೭,೮೯,೭೯೧ ರೂಪಾಯಿಗಳ ಪರಿಹಾರ ಧನವನ್ನು ಕೊಟ್ಟಿದ್ದೇವೆ. ಉಳಿದಂಥ ಭೂ ಮಾಲೀಕರಿಗೆ ಬಾಂಡ್ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಕಾನೂನು ಪ್ರಕಾರ ಯಾರಿಗೆ ಕೊಡಬೇಕಾಗಿದೆಯೋ ಅದಕ್ಕೆ ನಮ್ಮಲ್ಲಿ ಬಡ್ಜೆಟ್ ಪ್ರಾವಿಷನ್ ಕೂಡ ಮಾಡಿಕೊಂಡಿದ್ದೇವೆ, ಇದಕ್ಕೆ ಸುಮಾರು ೧೨ ಕೋಟಿ ರೂಪಾಯಿಗಳ ಪ್ರಾವಿಷನ್ ಮಾಡಿಕೊಂಡಿದ್ದೇವೆ. ಯಾರು ಯಾರಿಗೆ

ಪರಿಹಾರ ಧನ ಸಿಕ್ಕಿಲ್ಲವೆಂದು ಹೇಳಿದರೆ ಅವರಿಗೂ ಹಣ ಕೊಡಬಹುದು. ವಿಡೋಸ್, ಮೈನರ್ಸ್ ಮತ್ತು ಸ್ಮಾಲ್ ಫಾರ್ಮರ್ಸ್ ಬಿಟ್ಟು ಉಳಿದಂಥ ಭೂಮಾಲೀಕರಿಗೆ ಬಾಂಡುಗಳ ರೂಪದಲ್ಲಿ ಪರಿಹಾರ ಧನವನ್ನು ಕೊಡುತ್ತೇವೆ ಇನ್ನು ಒಂದೆರಡು ತಿಂಗಳಲ್ಲಿ ಈ ಬಾಂಡುಗಳನು ಇಷ್ಯೂ ಮಾಡುತ್ತೇವೆ. ಇದರ ಮೇಲೆ ಐದೂವರೆ ಪರ್ಸೆಂಟ್ ಬಡ್ಡಿಯನ್ನು ಕೊಡುತ್ತೇವೆ.

ಶ್ರೀ ಕಾಪು ಸಂಜೀವ ಶೆಟ್ಟಿ.—ತಾವು ಸುಮಾರು ೨೦ ಸಾವಿರ ಭೂಮಾಲೀಕರಿಗೆ ಪರಿಹಾರ ಧನವನ್ನು ಕೊಡಬೇಕು. ಇದರಲ್ಲಿ ೮-೧೦ ಸಾವಿರ ಜನ ದೊಡ್ಡ ಭೂಮಾಲೀಕರು ಇರಬಹುದು, ಉಳಿದವರು ಬಹಳ ಬಡವರು, ಸಣ್ಣ ರೈತರು, ಇವರು ಪರಿಹಾರಧನಕ್ಕಾಗಿ ಕಳೆದ ನಾಲ್ಕೈದು ವರ್ಷಗಳಿಂದ ಸಂಕಟಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ತಾವು ಉತ್ತರವಾಗಿ, ಈ ಜಿಲ್ಲೆಯಲ್ಲಿ ಅಂತಹ ಪ್ರಕರಣಗಳು ಯಾವುದು ಸ್ಪಷ್ಟ ಕಂಡುಬರುವುದಿಲ್ಲ ಎಂದು ಹೇಳಿದ್ದೀರಿ. ಪರಿಹಾರಧನವನ್ನು ಕೊಡಲಿಕ್ಕೆ ಸರ್ಕಾರಕ್ಕೆ ಹಣದ ಕೊರತೆಯಿಲ್ಲ ಆದರೆ ಇವತ್ತು ಸರಿಯಾದ ರೀತಿಯಲ್ಲಿ ಇದರ ಕೆಲಸಗಳು ಆಗುತ್ತಿಲ್ಲ. ಲಂಚದ ಹಾವಳಿಯಿಂದ ಯಾವ ಕೆಲಸಗಳೂ ಅಲ್ಲಿ ಸರಿಯಾಗಿ ತೀರ್ಮಾನವಾಗುತ್ತಿಲ್ಲ. ಸಣ್ಣ ರೈತರು ತಮ್ಮ ಭೂಮಿಯನ್ನು ಕಳೆದುಕೊಂಡು ಬಹಳ ಕಷ್ಟದಲ್ಲಿದ್ದಾರೆ, ತಾವು ಸೂಕ್ತ ಆದೇಶ ಕೊಟ್ಟು, ಆದಷ್ಟು ಬೇಗ ಉಳಿದ ಭೂಮಾಲೀಕರಿಗೆ ಪರಿಹಾರ ಧನವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ನಾನು ಈಗಾಗಲೇ ಹೇಳಿದ ಹಾಗೆ, ಕಾನೂನು ಪ್ರಕಾರ ಯಾರು ಯಾರು ಅರ್ಹರಿದ್ದಾರೆ ಅವರೆಲ್ಲರಿಗೂ ಪರಿಹಾರಧನವನ್ನು ಕೊಡುತ್ತೇವೆ. ಹೋದ ಸಲ ಇದಕ್ಕಾಗಿ ಕೊಟ್ಟ ಹಣದಲ್ಲಿ ಸುಮಾರು ನಾಲ್ಕು ಕೋಟಿ ರೂಪಾಯಿಗಳ ಹಣ ಲ್ಯಾಪ್ಸ್ ಆಯಿತು. ನಾವು ಯಾರು ಯಾರಿಗೆ ಬಾಂಡ್ಸ್ ಕೊಡಬೇಕು ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ ಅವರ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ ? ಈಗಾಗಲೇ ನಾವು ತೀರ್ಪಾದ ಕ್ರಮ ತೆಗೆದುಕೊಂಡು ಜೂನ್ ಕೊನೆಯ ವೇಳೆಗೆ ಟೆನ್ಷಿ ಕೇಸುಗಳನ್ನು ಮುಗಿಸಬೇಕು ಎಂದು ಮಾಡಿದ್ದೇವೆ, ನಮ್ಮ ಜಿಲ್ಲಾಧಿಕಾರಿಗಳು ಸಹ ಈ ಬಗ್ಗೆ ತೀವ್ರಕ್ರಮ ತೆಗೆದುಕೊಂಡಿದ್ದಾರೆ. ಉಳಿದ ಲ್ಯಾಂಡ್ ಲಾರ್ಡ್ಸ್ ಏನು ಇದ್ದಾರೆ ಅವರಿಗೆ ಆದಷ್ಟು ಬೇಗ ಪರಿಹಾರಧನವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ರಾಮಭಟ್ಟ —ತಾವು ಹೇಳುತ್ತಿದ್ದೀರಿ, ಯಾರಿಗೆ ಅರ್ಹತೆ ಇದೆ ಅಂಥವರಿಗೆ ಪರಿಹಾರ ಧನವನ್ನು ಕೊಡಲಿಕ್ಕೆ ತೊಂದರೆಯಿಲ್ಲ ಎಂದು, ಆದರೆ ನಮ್ಮ ಜಿಲ್ಲೆಯಲ್ಲಿ ಅರ್ಹತೆ ಇದ್ದು ಹಣದ ಕೊರತೆಯಿಂದ ಕೊಡುವುದಕ್ಕಾಗುತ್ತಿಲ್ಲವೆಂದು ಹೇಳುತ್ತಿದ್ದಾರೆ ಇದಕ್ಕೆ ತಾವು ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಈ ವರ್ಷ ನಾವು ಇದಕ್ಕಾಗಿ ಸುಮಾರು ೧೧ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ನಿಮ್ಮ ಜಿಲ್ಲಾಧಿಕಾರಿಗಳು ಕೇಳಿದಾಗಲೆಲ್ಲ ಎಷ್ಟೆಷ್ಟು ಹಣವನ್ನು ಕೇಳಿದ್ದಾರೋ ಅಷ್ಟಷ್ಟನ್ನು ಕೊಟ್ಟಿದ್ದೇವೆ. ಇನ್ನೂ ಬೇಕು ಎಂದರೆ ಹಣಕೊಡುತ್ತೇವೆ. ೪೪ ಕೇಸುಗಳನ್ನು ಬೇಗನೆ ಮುಗಿಸಬೇಕು ಎನ್ನುವ ದೃಷ್ಟಿಯಿಂದ ಉಳಿದವರಿಗೆ ಕಾಂಪನ್ಸೇಷನ್ ಕೊಡತಕ್ಕದ್ದಾಗಲೀ, ಕಾಂಪನ್ಸೇಷನ್ ಫಿಕ್ಸ್ ಮಾಡತಕ್ಕದ್ದಾಗಲೀ, ಅವಾರ್ಡ್ ಪಾಸ್ ಮಾಡತಕ್ಕದ್ದಾಗಲೀ ಲೇಟ್ ಆಗಿರಬಹುದು. ಆದರೂ ಸಂಬಂಧಪಟ್ಟವರಿಗೆ ತಿಳಿಸಿ ಇನ್ನು ಯಾರಿಗೆ ಪರಿಹಾರಧನವನ್ನು ಕೊಡಬೇಕೋ ಅವರಿಗೆ ತಕ್ಷಣ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕಾಪು ಸಂಜೀವ ಶೆಟ್ಟಿ.—ಈ ೨೦ ಸಾವಿರ ಭೂಮಾಲೀಕರಲ್ಲಿ, ಚಿಕ್ಕ ಭೂಮಾಲೀಕರು ಮಧ್ಯಮ ಭೂಮಾಲೀಕರು ಎಷ್ಟು ಎಷ್ಟು ಇದ್ದಾರೆಂದು ತಾವು ಲೆಕ್ಕವನ್ನೇನಾದರೂ ಇಟ್ಟಿದ್ದೀರಾ ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಆ ಲೆಕ್ಕ ಸಧ್ಯ ನನ್ನಲ್ಲಿಲ್ಲ.

T. C. H. Institutions sanctioned to K.G.F.

245. SRI C. M. ARUMUGHAM (K. G. F.)—Will the Minister of State for Primary and Secondary Education be pleased to state :—

(a) the number of T.C.H. Institutions sanctioned at K.G.F. and the authorised strength of each institution ;

(b) the yearly admission made in these Institutions for the last five years ;

(c) the number of students admitted in these institutions and appeared for the examination for the last 5 years ;

(d) the medium of instruction in these institutions ?

SMT NAGAMMA C. KESHAVA MURTHY (Minister of State for Primary and Secondary Education). –

(a)— Two

		Strength
1.	B.V.N.Teachers Training Institute for Women K.G.F. ...	120
2.	Suvarna Teacher, Training Institute K.G.F. ...	80

(b)—

	1977–78	1978–79	1979–80	1980–81	1981–82
(1)	251	301	324	324	64
(2)	...	...	...	210	40

(c)

Admitted

(1)	251	301	324	324	64
(2)	...	...	...	210	40

Appeared

(1)	251	301	324	324	64
(2)	...	...	...	100	25

(d)—

1.	B.V.N. Teacher Training Institute for Women K.G.F. ...	English
2.	Suvarna Teacher Training Institute, K.G.F. ...	Kannada English

SRI C.M. ARUMUGHAM.—The sanctioned strength of both the institutions namely the B V.N. Teacher Training Institute for Women and the Suvarna Teacher Training Institute is 120 and 80 respectively as per the reply given. But, in respect of B.V.N. Teacher Training Institute, the admission made for the last five years is 251,301,324, 324 and 64 and in respect of Survarna Teacher Training Institute the admission made during 1980-81 is 210. Whether the Government have issued any subsequent order increasing the sanctioned strength?

If the Government have not increased the strength by a Government order, then what action you are going to take against these institutions?

SMT. C. NAGAMMA KESHAVAMURTHY.—Sir, the order of the Government regulating the maximum intake was issued in the year 1981-82. The sanctioned strength to the B.V.N. Teacher Training Institute is 120 with three sections of 40 each and the sanctioned strength to the Suvarna Teacher Training Institute is 80 with two sections of 40 each. The admissions of more Candidates during those years, were made prior to the issuance of this Government order.

SRI C.M. ARUMUGHAM.—What was the order when they started the institution? Under what order they have admitted those numbers? Where is the Government order under which you have prescribed that the intake should be 120 in respect of B.V.N. Teacher Training Institute and 80 in respect of Suvarna Teacher Training Institute? What is the subsequent order?

SMT. C. NAGAMMA KESHAVAMURTHY.—As I have said already, the position prior to the year 1981-82 was different. In B.V.N. Teacher Training Institute six sections were allowed with 50 each and in Suvarna Teacher Training Institute two sections with 50 each were allowed. But in the year 1981-82, the maximum intake was reduced considering so many factors like unemployment of trained teachers etc., and the maximum intake was fixed as 120 and 80 respectively. After this Government order in the year 1981-82 the B.V.N. Teacher Training Institute has admitted 64 and the Suvarna Teacher Training Institute has admitted 40 against the sanctioned strength of 120 and 80 respectively.

SRI C.M. ARUMUGHAM.—Before allowing the students, did you at any time verify the requirement of trained teachers in Kannada and English schools in the State and if so, what is the requirement?

SMT. C. NAGAMMA KESHAVAMURTHY.—The yearly requirement of trained teachers in the State is between 4,000 to 5,000 considering the vacancies that arise due to the retirements, deaths, voluntary retirements etc., Formerly 9,000 trained teachers used to come out of these institutions. So, considering that aspect, we reduced the maximum intake from 50 to 40 per section. Instead of allowing 6 or 8 sections, we are allowing maximum three sections.

SRI C.M. ARUMUGHAM.—In the year 1980-81, the number of students admitted in the B.V.N. Teacher Training Institute was 324, but only 210 were permitted to appear for the examination and similarly in the case of Suvarna Institute, out of 324 only 100 students were permitted to appear for the examination. What